ಮಧ್ಯಮ ಗಾತ್ರದ ಮೈಕಟ್ಟು, ಬಿಳಿಯ ಬಣ್ಣದ ರವಿಕೆ, ಸುತ್ತಿಕೊಂಡಂತಿರುವ ನೀಲಿ ಬಣ್ಣದ ಸೀರೆ, ಸುಮಾರು ಮೂವತ್ತೈದರ ಆಸುಪಾಸಿನ ಹರೆಯ, ಇತರರು ಸುಖಾಸುಮ್ಮನೆ ಮಾತನಾಡಿಸುವುದಕ್ಕೆ ಹೆದರುವಷ್ಟು ಗಂಭೀರ ವದನ, ಪಕ್ಕಾ ಆದಿವಾಸಿ ಹೆಣ್ಣುಮಗಳು. ಪರಿಚಯವಾದ ಅನೇಕ ದಿನಗಳವರೆಗೆ ನಾನು ಆಕೆಯ ಹೆಸರನ್ನು ಕೇಳುವ ಪ್ರಯತ್ನ ಮಾಡಿರಲಿಲ್ಲ; ಆಕೆಯ ಸುಂದರ ಕಣ್ಣುಗಳನ್ನು ನೋಡಿ ನಾನೇ ಆಕೆಗೆ 'ಸುನಯನ' ಎಂದು ನಾಮಕರಣ ಮಾಡಿದ್ದೆ. ನಾನು ಆ ಹೆಸರಿನಿಂದ ಕರೆದರೆ ಆಕೆ ಮುಗುಳ್ನಗೆ ಬೀರುತ್ತಿದ್ದಳು. ಆಗ ಆಕೆಯ ಕೆನ್ನೆಯ ಬಳಿ ಬೀಳುತ್ತಿದ್ದ ಗುಳಿ ಆಕರ್ಷಕ.

ಅದೊಂದು ದಿನ ಆಕೆ ಬಿಡುವಾಗಿದ್ದಳು. ನಾನು ಮಾತಿಗೆಳೆದಿದ್ದೆ. ನಾನು ಹಿಂದಿಯಲ್ಲಿ ಪ್ರಶ್ನೆ ಕೇಳಿದರೆ ಆಕೆ ತನ್ನ ಆದಿವಾಸಿ ಭಾಷೆಯಲ್ಲಿ ಉತ್ತರ ನೀಡುತ್ತಿದ್ದಳು.

ನಾನು ಕೇಳಿದೆ, "ಹೇಗಿದ್ದೀಯಾ ಸುನಯನ?"

"ನಾಯೀ ಗೋ, ಆಮಾರ್ ನಾಮ್ ಸುನಯನ ನಾಯೀ. ಆಮಾರ್ ನಾಮ್ ರೀಟಾ ಬೋಲೆ." (ಅಲ್ಲ, ನನ್ನ ಹೆಸರು ಸುನಯನ ಅಲ್ಲ, ನನ್ನ ಹೆಸರು ರೀಟಾ).

"ನಿನ್ನ ಹೆಸರು ತುಂಬಾ ಚೆನ್ನಾಗಿದೆ; ಆದರೆ, ನಾನು ನಿನ್ನನ್ನು 'ಸುನಯನ' ಎಂದೇ ಕರೆಯುತ್ತೇನೆ; ಪರವಾಗಿಲ್ಲ ಅಲ್ಲವೇ?"

"ನಾಯೀ ಗೋ." (ಇಲ್ಲ).

ಆಕೆಗೆ ಹಿಂದಿ ಚೆನ್ನಾಗಿ ಬರುತ್ತಿರಲಿಲ್ಲ. ನಾನು ಹಿಂದಿಯಲ್ಲಿ ಪ್ರಶ್ನೆ ಕೇಳಿದರೆ ಆಕೆ ಅರೆಬರೆ ಹಿಂದಿಯಲ್ಲಿ ಉತ್ತರಿಸುತ್ತಿದ್ದಳು. ಹೆಚ್ಚು ಮಾತನಾಡುವುದಿದ್ದರೆ, ಆಕೆ ತನ್ನ ಆದಿವಾಸಿ ಭಾಷೆಯಲ್ಲಿಯೇ ಮಾತನಾಡುತ್ತಿದ್ದಳು. ನನಗೂ ಅಷ್ಟೇ, ಆದಿವಾಸಿ ಭಾಷೆ ಅರ್ಥವಾಗುತ್ತಿತ್ತು; ಆದರೆ ಉತ್ತರಿಸುವುದಕ್ಕೆ, ಮಾತನಾಡುವುದಕ್ಕೆ ಬರುತ್ತಿರಲಿಲ್ಲ.

ಪ್ರತಿ ದಿನವೂ ಆಕೆ ಬೆಳಿಗ್ಗೆ ಆ ಮೈದಾನದ ಸಮೀಪ ಬಸ್ಸಿನಿಂದ ಇಳಿಯುತ್ತಿದ್ದಳು. ಆಕೆಯ ಮಡಿಲಿನಲ್ಲಿ ಸುಮಾರು ಎರಡು ವರ್ಷದ ಆಕೆಯ ಮಗಳು; ಆಕೆಯನ್ನು ಸೊಂಟಕ್ಕೆ ಒತ್ತಿಕೊಳ್ಳುತ್ತಲೇ ಇಳಿಯುತ್ತಿದ್ದಳು. ಆಕೆ ಇಳಿದ ನಂತರ ಬಸ್ಸಿನ ಸಹಾಯಕ ರೀಟಾಳ ಕುರುಡ ಪತಿಯನ್ನು ಬಹಳ ಸಾವಧಾನವಾಗಿ ಇಳಿಸುತ್ತಿದ್ದ. ಬಸ್ಸಿನ ಟಾಪ್‌ನಲ್ಲಿ ಇರಿಸಲಾಗುತ್ತಿದ್ದ ತರಕಾರಿ ಬುಟ್ಟಿಗಳನ್ನು ಇಳಿಸಿ, ರೀಟಾಳ ಬಳಿಯಲ್ಲಿ ಇಟ್ಟ ನಂತರವೇ ಆತ ಸೀಟಿ ಊದುತ್ತಿದ್ದುದು.

ರೀಟಾ ತನ್ನ ಮಗಳನ್ನು ಬೆನ್ನಿಗೆ ಒಂದು ಟವೆಲ್ಲಿನ ಸಹಾಯದಿಂದ ಕಟ್ಟಿಕೊಳ್ಳುತ್ತಿದ್ದಳು; ತರಕಾರಿ ಬುಟ್ಟಿಯನ್ನು ತಲೆಯ ಮೇಲೆ ಯಾರದಾದರೂ ಸಹಾಯ ಪಡೆದು ಇರಿಸಿಕೊಳ್ಳುತ್ತಿದ್ದಳು; ಪತಿಯ ಒಂದು ಕೈಯನ್ನು ತನ್ನ ಹೆಗಲ ಮೇಲೆ ಇರಿಸಿಕೊಳ್ಳುತ್ತಿದ್ದಳು; ಅಲ್ಲಿಂದ ನಿಧಾನವಾಗಿ ನಡೆದು, ತಾನು ವ್ಯಾಪಾರಕ್ಕೆ ಕುಳಿತುಕೊಳ್ಳುವ ಮೈದಾನದ ಮಾಮೂಲಿ ಸ್ಥಳಕ್ಕೆ ಬರುತ್ತಿದ್ದಳು. ಒಂದು ಪ್ಲಾಸ್ಟಿಕ್ ಚೀಲವನ್ನು ಸಮೀಪದಲ್ಲಿಯೇ ಹಾಸುತ್ತಿದ್ದಳು. ಅದರ ಮೇಲೆ ಆಕೆಯ ಪತಿ ಕುಳಿತುಕೊಳ್ಳುತ್ತಿದ್ದ; ಮಗಳು ಕೆಲವೊಮ್ಮೆ ತಂದೆಯ ತೊಡೆಯ ಮೇಲೆ, ಮತ್ತೆ ಕೆಲವೊಮ್ಮೆ ಸಮೀಪದಲ್ಲಿ ಮಣ್ಣನ್ನು ಬಗೆಯುತ್ತ ಯಾವುದೋ ಆಟವಾಡುತ್ತ ಕುಳಿತುಕೊಳ್ಳುತ್ತಿದ್ದಳು.

ತೆಳ್ಳಗಿನ ಮೈಕಟ್ಟಿನ ಆಕೆಯ ಪತಿ ಸಂಜೆಯಾಗುವವರೆಗೂ ಅದೇ ಸ್ಥಳದಲ್ಲಿ ಕುಳಿತಿರುತ್ತಿದ್ದ. ಆತನ ಪರಿಸ್ಥಿತಿಯನ್ನು ನೋಡಿ, ದೇವರ ಬಗ್ಗೆ ವಿಶೇಷ ನಂಬಿಕೆ ಇಲ್ಲದ ನಾನೂ ಕೂಡ 'ದೇವರೇ, ಈತನಿಗೆ ನೀಡಿದ ಕಷ್ಟವನ್ನು ಹಿಂತೆಗೆದುಕೋ; ಮತ್ಯಾರಿಗೂ ಇಂತಹ ಕಷ್ಟವನ್ನು ನೀಡಬೇಡ, ಅನ್ಯಾಯ ಮಾಡಬೇಡ' ಎಂದು ಬೇಡಿಕೊಂಡಿದ್ದೇನೆ.

ರೀಟಾ ಅನೇಕ ಬಾರಿ ಎದುರಿನಲ್ಲಿರುವ ಒಂದು ಸಿಹಿ ತಿನಿಸಿನ ಅಂಗಡಿಯಲ್ಲಿ 'ಗುಲ್‌ಗುಲಾ'